ಇ. ಉದ್ಭವಿಸುವುದಿಲ್ಲ.

ಈ. ಅನುದಾನದ ಲಭ್ಯತೆಯನ್ನು ಆಧರಿಸಿ ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳ ಕೊಠಡಿಗಳನ್ನು ಹಾಗೂ ಆವರಣಗಳನ್ನು ಶುಚಿಯಾಗಿ ಇಡಲು ಕ್ರಮ ಕೈಗೊಳ್ಳಲಾಗುತ್ತಿದೆ.

212 (413): ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. Whether the Government is aware that all the Police Stations are filled with 2 and 4 Wheelers which are being confiscated ceased for the violation of law and kept in the premises for years Together;

ಆ. If so, the Reasons for delay in disposing the cases;

ಇ. The Necessary action Taken to dispose them early;

ಈ. What is hindering the department to Expedite the Process;

ಉ. The new law that could not be Enacted in this Regard?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ಹೌದು, ವಿವರಗಳನ್ನು ಅನುಬಂಧ ಎ ನಲ್ಲಿ ನೀಡಲಾಗಿದೆ.

ಆ. ಈ ಕೆಳಗಿನ ಕಾರಣಗಳಿಂದ ಪ್ರಕರಣಗಳ /ವಾಹನಗಳ ವಿಲೇವಾರಿಯಲ್ಲಿ ವಿಳಂಭವಾಗುತ್ತಿದೆ:

1. ಹೆಚ್ಚಿನ ಪ್ರಕರಣಗಳಲ್ಲಿ ಆರೋಪಿಗಳು ನೀಡಿದ ಮಾಹಿತಿಯ ಮೇರೆಗೆ ವಾಹನಗಳನ್ನು ವಶಪಡಿಸಿಕೊಂಡು, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುತ್ತಿದೆ. ಆದರೆ ಸ್ಥಳದ ಅಭಾವದಿಂದ ವಶಪಡಿಸಿಕೊಂಡ ವಾಹನಗಳನ್ನು ನ್ಯಾಯಾಲಯ ಸ್ವೀಕರಿಸಿಲ್ಲ.

2. ಕೆಲವು ಪ್ರಕರಣಗಳಲ್ಲಿ ವಾಹನಗಳ ಮಾಲೀಕರ ಮಾಹಿತಿ ಅಥವಾ ಮಾಲೀಕರ ಮಾಹಿತಿ ಅಥವಾ ಮಾಲೀಕರು ಪತ್ತೆ ಹಾಗದಿದ್ದಲ್ಲಿ ಅಂತಹ ವಾರಸುದಾರರಿಲ್ಲದ ವಾಹನಗಳು ಠಾಣೆಗಳು ಆವರಣದಲ್ಲಿ ಉಳಿದಿರುತ್ತವೆ.

3. ಹೆಚ್ಚಿನ ಪ್ರಕರಣಗಳು ನ್ಯಾಯಾಲಯದಲ್ಲಿ ವಿಲೇವಾರಿಗೊಂಡರೂ, ವಾಹನಗಳ ಮಾಲೀಕರು ವಿಮಾ ಕಂಪನಿಯಿಂದ ವಾಹನ ಮೌಲ್ಯವನ್ನು ಪಡೆಯಬೇಕಾಗುತ್ತದೆ. ಅಂತಹ ವಾಹನಗಳಿಗೆ ವಿಮಾ ಕಂಪನಿಯು ಮೌಲ್ಯ

ನಿಗಧಿಪಡಿಸುವವರೆಗೆ, ಮಾಲೀಕರು ವಾಹನಗಳನ್ನು ಪಡೆಯಲು ಆಸಕ್ತಿ ವಹಿಸದೆ, ಅವುಗಳ ಠಾಣೆಯ ಆವರಣದಲ್ಲಿಯೇ ಉಳಿದಿರುತ್ತದೆ.

4. ಠಾಣೆಗಳ ಆವರಣದಲ್ಲಿ ವಾರಸುದಾರರಿಲ್ಲದ ವಾಹನಗಳ ವಿಲೇವಾರಿಗೆ ನ್ಯಾಯಾಲಯದ ಆದೇಶ, ಗೆಜೆಟ್ ಪ್ರಕಟಣೆ, ಸಾರ್ವಜನಿಕ ಹರಾಜು, ಇತ್ಯಾದಿ ವಿಧಾನಗಳಿಂದ ಕ್ರಮ ಕೈಗೊಳ್ಳಬೇಕಾಗಿದ್ದು, ಇದಕ್ಕೆ ಸುಮಾರು 6 ತಿಂಗಳಿಗಿಂತ ಹೆಚ್ಚುಕಾಲ ತೆಗೆದುಕೊಳ್ಳುವುದರಿಂದ ಅವುಗಳು ಹಾಗೆಯೇ ಉಳಿದಿರುತ್ತವೆ.

5. ಕೆಲವು ವಾಹನಗಳನ್ನು ಆರ್.ಟಿ.ಓ. ಅಧಿಕಾರಿಗಳು ಮತ್ತು ಕೆಲವು ವಾಹನಗಳನ್ನು ಅಬಕಾರಿ ಕಾಯ್ದೆ ಅಡಿ ಮತ್ತು ಅರಣ್ಯ ಕಾಯ್ದೆ ಅಡಿ ವಶಪಡಿಸಿಕೊಂಡು ಸುರಕ್ಷಾ ದೃಷ್ಟಿಯಿಂದ ಪೊಲೀಸ್ ಠಾಣೆಗಳ ಆವರಣದಲ್ಲಿ ಇಟ್ಟಿರುತ್ತಾರೆ.

ಇ. ನ್ಯಾಯಾಲಯದ ಆದೇಶ ಪಡೆದು ಈ ವಾಹನಗಳ ವಿಲೇವಾರಿಗಾಗಿ ಆದಷ್ಟು ಬೇಗ ಕ್ರಮ ಕೈಗೊಳ್ಳಲಾಗುವುದು.

ಈ. 1. ದೀರ್ಘ ಮತ್ತು ಹೆಚ್ಚು ಸಮಯ ತೆಗೆದುಕೊಳ್ಳಲಿರುವ ನಡವಳಿ.

2. ಹೆಚ್ಚಿನ ಪ್ರಕರಣಗಳಲ್ಲಿ ನ್ಯಾಯಾಲಯದ ವಿಚಾರಣೆ ಮುಗಿಯದೆ ವಾಹನಗಳ ವಿಲೇವಾರಿಗಾಗಿ ನ್ಯಾಯಾಲಯ ಆದೇಶ ನೀಡುವುದಿಲ್ಲ. ಇದಕ್ಕೆ ಬಹಳ ಸಮಯ ತೆಗೆದುಕೊಳ್ಳುತ್ತದೆ.

ಉ. ಹೊಸ ಕಾನೂನು ರಚಿಸುವ ಅಗತ್ಯತೆ ಸದ್ಯಕ್ಕೆ ಕಂಡುಬರುವುದಿಲ್ಲ. ವಶಪಡಿಸಿಕೊಂಡ/ ವಾರಸುವಾರರಿಲ್ಲದ ವಾಹನಗಳ ಶೀಘ್ರ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು.

ANNEXURE-A

No. of Vehicles confiscated seized for the Violation of the law and kept in the Premises without Disposal

Sl No	Units/Cities	Two Wheelers	Four Wheelers
1	Bangalore City	1149	140
2	Mysore City	118	28
3	Hubli Dharwad City	24	07
4	Bangalore Dist	183	32
5	Tumkur	87	31
6	Kolar	107	17
7	KGF	50	03
8	Mysore Dist	117	51

9	Hassan	124	42
10	Kodagu	23	12
11	Mandya	131	11
12	Chamrajanagar	35	12
13	Davanagere	61	09
14	Chitradurga	30	22
15	Shimoga	54	17
16	Bellary	23	02
17	DK	31	17
18	UK	11	12
19	Chickmagalur	34	12
20	Udupi	83	19
21	Belgaum	13	17
22	Dharwad	04	00
23	Bijapur	41	08
24	Gadag	03	01
25	Haveri	13	09
26	Bagalkot	53	11
27	Gulbarga	00	00
28	Raichur	37	06
29	Bidar	48	03
30	Koppal	00	00
31	Railways	04	00
	TOTAL	**2691**	**551**

213 (281): ಶ್ರೀ ಜಯಪ್ರಕಾಶ್ ಕೆ (ಬ್ರಹ್ಮಾವರ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಸಮುದ್ರ ಕೊರೆತದಿಂದಾಗಿ ಮನೆ. ಬೆಳೆ ಹಾಗೂ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. 2004ನೇ ಸಾಲಿನ ಮಾರ್ಚ್ ನಂತರ ಎಲ್ಲೆಲ್ಲಿ ಸಮುದ್ರ ಕೊರೆತಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ;

ಇ. ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು? (ಈವರೆಗಿನ ಪ್ರಗತಿಯ ಕ್ಷೇತ್ರವಾರು ವಿವರ ನೀಡುವುದು)